ಬೇಕಾದರೆ ಈಗ ಕಾನೂನನ್ನೇ ಬದಲಾಯಿಸಬೇಕಾಗುತ್ತದೆ.

ಶ್ರೀ ಕೆ. ವಿ. ಬೈರೇಗೌಡ.—ಬೆಂಗಳೂರಿನ ಸುತ್ತಲೂ 'ಬೆಲ್ಟ್ ಏರಿಯಾ' ದಲ್ಲಿ ರೆವಿನ್ಯೂ ಜಮೀನಿನಮೇಲೆ ಮನೆಗಳನ್ನು ಕಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಅನೇಕರು ತಮ್ಮ ಜಮೀನುಗಳನ್ನು ಲಾಭಕ್ಕಾಗಿ ಮಾರಿ ಆ ಸ್ಥಳಗಳಲ್ಲಿ ಅನೇಕರು ಅಕ್ರಮವಾಗಿ ಮನೆಗಳನ್ನು ಕಟ್ಟಿದ್ದಾರೆ.

ಶ್ರೀ ಕೆ. ವಿ. ಬೈರೇಗೌಡ.—ಎಲ್ಲವೂ unauthorised construction ಎಂಬುದು ತಮ್ಮ ಗಮನಕ್ಕೆ ಬಂದಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಬಹಳ ಮಟ್ಟಿಗೆ unauthorised constructions.

ಶ್ರೀ ಕೆ. ವಿ. ಬೈರೇಗೌಡ.—ಇಂಥಾದ್ದಕ್ಕೆ ಸ್ಪೆಷಲ್ ಫೈನ್‌ಹಾಕಿ ವಸೂಲುಮಾಡಲು ವಿಶೇಷ ಸಿಬ್ಬಂದಿಯನ್ನು ಏರ್ಪಾಡು ಮಾಡಿದ್ದೀರಾ?

ಈ ವಸೂಲಿ ಕೆಲಸ ಸರಿಯಾಗಿ ನಡೆಯುತ್ತಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ನಡೆಯುತ್ತಿದೆ.

Doddanakkundi Tank (Repairs)

Q.—132. Sri B. T. KEMPARAJ (Bangalore-South Scheduled Castes).—

Will the Government be pleased to state:—

(*a*) whether the Doddanakkundi tank is a major one or a minor one;

(*b*) whether there is a proposal to improve the tank and also to desilt it;

(*c*) what is the estimated cost;

(*d*) whether it has been sanctioned; and if so, the stage at which it is pending?

A.—Sri Kadidal MANJAPPA (Minister for Revenue and Public Works).—

(*a*) Major tank.

(*b*) Yes.

(*c*) Rs. 15,500.

(*d*) No enquiry under the Irrigation Act has to be completed.

ಶ್ರೀ ಬಿ. ಟಿ. ಕೆಂಪರಾಜ್.—ಅಂದಾಜು ಮಾಡಿ ಮುದು ಯಾವಾಗ?

ಶ್ರೀ ಕಡಿದಾಳ್ ಮಂಜಪ್ಪ.—ಯಾವ ತಾರೀಕು ಯಾವ ತಿಂಗಳು ಎಂಬುದು ಗೊತ್ತಿಲ್ಲ; ಇತ್ತೀಚೆಗೆ 15,500 ರೂಪಾಯಿಗೆ ಅಂದಾಜು ತಯಾರು ಮಾಡಿದ್ದಾರೆ.

ಶ್ರೀ ಬಿ. ಟಿ. ಕೆಂಪರಾಜ್.—ಎಷ್ಟು ತಿಂಗಳಾಯಿತೆಂದು ಕೇಳುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪ.—ಆ ವಿವರ ಈಗ ನನ್ನಲ್ಲಿಲ್ಲ.

ಶ್ರೀ ಬಿ. ಟಿ. ಕೆಂಪರಾಜ್.—ನೀರಾವರಿ ಕಾನೂನಿನ ಮೇರೆಗೆ ವಿಚಾರಣೆಯನ್ನು ಮುಗಿಸಬೇಕಾಗಿದೆ ಎಂದು ತಿಳಿಸಿದ್ದೀರಿ, ಯಾವ ವಿಚಾರಣೆ?

ಶ್ರೀ ಕಡಿದಾಳ್ ಮಂಜಪ್ಪ.—ರೈತರು ಕಂಟ್ರಿಬ್ಯೂರ್ಷನ್, ವಾಟರ್ ರೇಟ್ ಎಷ್ಟು ಕೊಡುತ್ತಾರೆಂಬ ಬಗ್ಗೆ ವಿಚಾರಣೆಯಾಗಬೇಕು, ರೈತರು ಕೊಡುತ್ತೇವೆಂದು ಇನ್ನೂ ಒಪ್ಪಿಕೊಂಡಿಲ್ಲ.

ಶ್ರೀ ಎ. ಎ. ನರಸಿಂಹರೆಡ್ಡಿ.—15,500 ರೂಪಾಯಿಗೆ ಅಂದಾಜಾಗಿದೆಯೆಂದು ಹೇಳುತ್ತೀರಿ, ಅಲ್ಲಿ ಅಚ್ಚುಕಟ್ಟು ಎಷ್ಟಿದೆ?

ಶ್ರೀ ಕಡಿದಾಳ್ ಮಂಜಪ್ಪ.—137 ಎಕರೆ ಇದೆ.

ಶ್ರೀ ಎ. ಎ. ನರಸಿಂಹರೆಡ್ಡಿ.—ಅಂದಾಜು ತಯಾರುಮಾಡಿ ಎಷ್ಟು ದಿವಸವಾಯಿತು?

Sri Kadidal MANJAPPA.—I can only say that it was prepared recently and the raiyats have not yet executed the mutchalika regarding the contribution and water rate.

ಶ್ರೀ ಎ. ಎ. ನರಸಿಂಹರೆಡ್ಡಿ.—ಇಂಜಿನಿಯರಿಂಗ್ ಇಲಾಖೆಯವರು ರೈತರಲ್ಲಿ ಹೋಗಿ ಮುಚ್ಚಳಿಕೆ ಬರೆದು ಕೊಡಬೇಕೆಂದು ಕೇಳಿದ್ದಾರೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಕೇಳಿದ್ದಾರೆಂದು ವರದಿ ಬಂದಿದೆ.

Tank near Huluvagala, Koratagere Taluk, (Construction).

Q.—441. Sri MUDDURAMIAH (Koratagere-Madhugiri).—

Will the Government be pleased to state:—

(*a*) whether an estimate has been prepared for the construction of a tank near Huluvagala, Kolala Hobli, Koratagere taluk;

(*b*) if so, when the tank work will be taken up?

A.—Sri Kadidal MANJAPPA (Minister for Revenue and Public Works).—

(*a*) Yes.

(*b*) The matter is still under consideration.

ಶ್ರೀ ಮುದ್ದುರಾಮಯ್ಯ.—ಇದರ ಅಂದಾಜು ಪೊಬಲಗೆಷ್ಟು?

ಶ್ರೀ ಕಡಿದಾಳ್ ಮಂಜಪ್ಪ.—31,000 ರೂಪಾಯಿ.

ಶ್ರೀ ಮುದ್ದುರಾಮಯ್ಯ.—ತಯಾರಾಗಿ ಎಷ್ಟು ದಿವಸವಾಯಿತು?

ಶ್ರೀ ಕಡಿದಾಳ್ ಮಂಜಪ್ಪ.—ಇತ್ತೀಚೆಗೆ.

ಶ್ರೀ ಮುದ್ದುರಾಮಯ್ಯ.—ಒಂದು ಅಂದಾಜು ತಯಾರಾದ ಮೇಲೆ ಆ ಕೆಲಸ ತೆಗೆದುಕೊಳ್ಳುವುದಕ್ಕೆ ಎಷ್ಟು ಕಾಲ ಹಿಡಿಯಬಹುದು?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ಪರಿಶೀಲನೆ ಮಾಡಬೇಕು. ಇದಕ್ಕೆ ಖರ್ಚಾಗುವುದು 31,000 ರೂಪಾಯಿ, ಇದರಿಂದ ಅನುಕೂಲ ಹೊಂದತಕ್ಕ ಪ್ರದೇಶ 30 ಎಕರೆ, ಇದರಿಂದ ಮುಳುಗಿ ಹೋಗುವ ಪ್ರದೇಶ 20 ಎಕರೆ ಹಿಡುವಳಿ ಜಮೀನು. ಆದುದರಿಂದ ಇದು ಯೋಚನೆ ಮಾಡಬೇಕಾದ ಅಂಶವಾಗಿದೆ.